**ಕರ್ನಾಟಕ ಸರ್ಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಚೇರಿ, ನೃಪತುಂಗಾ ರಸ್ತೆ**
**ಬೆಂಗಳೂರು- 560001**

ಸಂಖ್ಯೆ:ಸಿ7(8) ಆರ್.ಟಿ.ಇ/2021-22ನೇ ಸಾ.ದಾ.ಪ್ರ.ಪೂ.ಸಿದ್ಧತೆ/2021-22 ದಿನಾಂಕ:11.05.2021

**<u>ಸುತ್ತೋಲೆ</u>**

ವಿಷಯ: 2021-22ನೇ ಸಾಲಿಗೆ ಶಿಕ್ಷಣ ಹಕ್ಕು ಕಾಯಿದೆ-2009ರ ಸೆಕ್ಷನ್ 12(1)(ಬಿ) ಮತ್ತು ಸೆಕ್ಷನ್ 12(1)(ಸಿ) ರಡಿಯಲ್ಲಿ ಪ್ರವೇಶ ಪ್ರಕ್ರಿಯೆ ಬಗ್ಗೆ

ಉಲ್ಲೇಖ:1. ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಖ:08.02.2021 ಮತ್ತು ದಿನಾಂಕ:07.04.2021
2. ಈ ಕಚೇರಿ ಸುತ್ತೋಲೆ ಸಂ:ಸಿ4(6) ಶೈ ಮತ್ತು ರಜೆ.ಅ ನಿಗದಿ-35/2020-21 ದಿನಾಂಕ:04.05.2021ಮತ್ತು ದಿನಾಂಕ:20.04.2021

***

2021-22ನೇ ಸಾಲಿನ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1)(ಬಿ) ಮತ್ತು ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪ್ರಕ್ರಿಯೆ ನಡೆಸಲು ಉಲ್ಲೇಖ(1)ರಲ್ಲಿನ ಸುತ್ತೋಲೆಗಳಲ್ಲಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಆದರೆ ಉಲ್ಲೇಖ-2ರಲ್ಲಿನ ಈ ಕಚೇರಿಯ ಸುತ್ತೋಲೆಗಳಲ್ಲಿ ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ 2021-22ನೇ ಸಾಲಿನ ಶೈಕ್ಷಣಿಕ ವರ್ಷಾರಂಭ ಕುರಿತು ತಾತ್ಕಾಲಿಕ ವೇಳಾ ಪಟ್ಟಿ ಪ್ರಕಟಿಸಲಾಗಿರುತ್ತದೆ. ಕೋವಿಡ್-19 ರೋಗ ಹರಡುವಿಕೆಯಿಂದ ಪ್ರಸ್ತುತ ರಾಜ್ಯದಾದ್ಯಂತ ಶಾಲೆಗಳು ರಜೆಯಲ್ಲಿರುವುದರಿಂದ ಮೇಲ್ಕಂಡಂತೆ ಆರ್.ಟಿ.ಇ ಕಾಯ್ದೆಯಡಿಯಲ್ಲಿನ ದಾಖಲಾತಿಗೆ ಸರ್ಕಾರದ ನಿರ್ಧಾರವನ್ನು ಆಧರಿಸಿ ಪರಿಷ್ಕೃತ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ನಿಗದಿಪಡಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
11/5/21

ರವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉ[ಪನಿರ್ದೇಶಕರು(ಆಡಳಿತ) ಇಚರ ಮೂಲಕ ಸೂಕ್ತ ಕ್ರಮಕ್ಕಾಗಿ
3. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಇ-ಆಡಳಿತ ವಿಭಾಗ, ಆಯುಕ್ತರ ಕಚೇರಿ, ಸಾ.ಶಿ.ಇ, ಬೆಂಗಳೂರು, ಇವರಿಗೆ ಸೂಕ್ತ ಕ್ರಮಕ್ಕಾಗಿ.

Scanned with CamScanner